

# ಸುಜಲರಕ್ಷಣೆ

## 'ನಾಗರಿಕ' ಮನಸ್ಸಿನ ದುಗುಡಗಳು ಹಾಗೂ ಆಶೋತ್ತರಗಳ ಮರುಪೂರಣ..!

**ಶ್ರೀನಾಥ ಜೋಷಿ**
ಬಳ್ಳಾರಿ

ವನವಾಸಿ ಜನಸಮುದಾಯಗಳ ಕುರಿತಾಗಿ ಆಳವಾದ ಅಧ್ಯಯನ ಮಾಡಿರುವಂತಹ ಹಿರಿಯ ಸಂಶೋಧಕರೊಬ್ಬರು ಒಮ್ಮೆ ತಮ್ಮ ಉಪನ್ಯಾಸದಲ್ಲಿ ತಮ್ಮ ಅನುಭವವನ್ನು ಹೀಗೆ ಹಂಚಿಕೊಳ್ತಾರೆ... 'ದಟ್ಟ ಹಸುರಿನ ಕಾಡಿನ ಗಿರಿ ಕಂದರಗಳು, ನದಿ ಜಲಪಾತಗಳು, ಅಲ್ಲಿನ ಸೂರ್ಯಾಸ್ತ, ಅಸ್ತಮಾನ, ಗಿಡಮರಗಳ ಸಂದಿನಲ್ಲಿ, ಗುಡ್ಡದ ತುದಿಗಳಲ್ಲಿನ ನೇಸರನ ಹೊಂಗಿರಣಗಳ ಕಣ್ಣುಮುಚ್ಚಾಲೆ, ಅಲ್ಲಿನ ನೀರವತೆಯ ಗಾಢತೆಯನ್ನು ಹೆಚ್ಚಿಸುವ ಕಾಡುಹಕ್ಕಿಗಳ ಕಲರವ...! ಕಾಡಿನ ಈ ಎಲ್ಲ ನಿಸರ್ಗ ಸೌಂದರ್ಯವನ್ನು , ಆ ವನವಾಸಿಗಳ ಮುಂದೆ ಯಾರಾದರೂ ರಸವತ್ತಾಗಿ ಹೀಗೆ ವರ್ಣಿಸಿದಲ್ಲಿ ಅದಕ್ಕವರ ಪ್ರತಿಕ್ರಿಯೆ ಹೇಗಿರಬಹುದು?! ಅದಕ್ಕವರು ಅಚ್ಚರಿಗೊಂಡವರಂತೆ, ಏನೂ ಅರ್ಥವಾಗದವರಂತೆ, ಅದು ತಮಗೆ ಸಂಬಂಧಿಸಿದ್ದೇ ಅಲ್ಲವೇನೋ ಎಂಬಂತೆ, ನಿರ್ಭಾವುಕ, ಅರಸಿಕ ಸ್ಪಂದನೆ ನೀಡ್ತಾರೆ..! ಕಾಡುಜನರ ಈ ಮುಗ್ಧ ಸ್ಪಂದನೆಗೆ ಕಾರಣವೇನಿರಬಹುದು? ಕಾರಣವಿಷ್ಟೇ... ಅವರು ತಮ್ಮ ಸುತ್ತಲಿನ ಪ್ರಕೃತಿಯಲ್ಲಿ ಲೀನವಾಗುಳಿದಿದ್ದಾರೆ! ಅವರು ತಮ್ಮ ಪ್ರತ್ಯೇಕ ಅಸ್ತಿತ್ವವೇ ಇಲ್ಲವೇನೋ ಎಂಬಂತೆ, ಪ್ರಕೃತಿಯಲ್ಲಿ ಬೆರೆತುಹೋಗಿದ್ದಾರೆ. ಅಥವಾ ಅವರಿನ್ನೂ ಪ್ರಕೃತಿಯಿಂದ ಬೇರೆಯಾಗಿ ಹೊರಬಂದು, ನಮ್ಮಂತೆ 'ನಾಗರಿಕ'ರಾಗಿಲ್ಲ...!'

ಆ ಹಿರಿಯರ ಈ ಅನುಭವದ ಮಾತುಗಳು ಹೊಸತೊಂದು ಅರಿವಿನ ಅನಾವರಣವನ್ನು ಮಾಡುತ್ತವೆ. ಹೊಸ ಆಯಾಮದ ಚಿಂತನೆಗೆ ನಮ್ಮನ್ನು ತೊಡಗಿಸುತ್ತವೆ. 'ಜಲ'ದ ವಿಷಯದಲ್ಲೂ ಈ ಸತ್ಯವು ಅನ್ವಯವೇ...

ಇದೇ ಸೂತ್ರದಲ್ಲಿ –

– ಕೃಷಿ, ಪಶುಸಂಗೋಪನೆ, ಗ್ರಾಮೀಣ ಜನಜೀವನ... ಇವು ತಮ್ಮಲ್ಲಿ ಒಂದನ್ನೊಂದು ಬೆಸೆದುಕೊಂಡಂತೆಯೇ, 'ಜಲಸಂರಕ್ಷಣೆ'ಯ ಜೊತೆಗೂ ತಮ್ಮನ್ನು ಗಾಢವಾಗಿ ಹೊಸೆದುಕೊಂಡಿವೆ...! 'ಸುಜಲರಕ್ಷಣೆ'ಯ ಅರಿವು, ಅನುಷ್ಠಾನ, ಇವು... ಕೃಷಿ, ಪಶುಸಂಗೋಪನೆ ಹಾಗೂ ಗ್ರಾಮೀಣ ಬದುಕಿನ